sdmimd

# Mysuru Mithra

**Date:** 28-11-2019 **Page No:** 2

**Edition:** Mysore **Language:** Kannada

## ಎಸ್‌ಡಿಎಂಐಎಂಡಿಯಲ್ಲಿ ಸಂಭ್ರಮದ ಕನ್ನಡ ರಾಜ್ಯೋತ್ಸವ



ಮೈಸೂರು, ನ. 27– ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ (SDM IMD) ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿದರು.

ಸಂಸ್ಥೆಯ ಆವರಣವನ್ನು ಬಾವುಟ, ಚಪ್ಪರ, ಹೂವುಗಳು ಹಾಗೂ ಬಂಟಿಂಗ್ಸ್‌ನಿಂದ ಅಲಂಕರಿಸುವುದರೊಂದಿಗೆ ಹಬ್ಬದ ವಾತಾವರಣ ಸೃಷ್ಟಿಸಲಾಯಿತು.

40 ಅಡಿ ಉದ್ದದ ಕನ್ನಡ ಬಾವುಟವನ್ನು ಹಾರಿಸಿ, ಕನ್ನಡದ ನಾಡಗೀತೆಯಾದ 'ಜೈ ಭಾರತ ಜನನಿಯ ತನುಜಾತೆ' ಯನ್ನು ಹಾಡುವುದರ ಮೂಲಕ ಕಾರ್ಯಕ್ರಮದ ಶುಭಾರಂಭವಾಯಿತು. ಶೈಕ್ಷಣಿಕ ವಿಭಾಗದ ಉಪ ನಿರ್ದೇಶಕಿ ಡಾ.ಹೆಚ್. ಗಾಯತ್ರಿ ಶುಭ ಕೋರಿದರು.

ಕನ್ನಡ ಬಾವುಟವನ್ನು ಹೋಲುವ ಹಳದಿ ಮತ್ತು ಕೆಂಪು ಬಣ್ಣ ಜೋಡಿಯ ವಲ್ಲಿಯನ್ನು ಪ್ರತಿಯೊಬ್ಬರು ಧರಿಸಿದ್ದರಿಂದ, ಒಂದು ಪುಟ್ಟ ಕರ್ನಾಟಕವೇ ಅಲ್ಲಿ ನೆರೆದಂತೆ ಇತ್ತು. ವಿದ್ಯಾರ್ಥಿಗಳು, ಶಿಕ್ಷಕವರ್ಗ ಮತ್ತು ಸಿಬ್ಬಂದಿ ಕನ್ನಡ ಮಾತೆಗೆ ಆರತಿ ಬೆಳಗುವುದರ ಮೂಲಕ ಗೌರವ ಸಲ್ಲಿಸಿದರು. ಸಂಜೆ ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸ್ಥಳೀಯ, ಸಾಂಪ್ರದಾಯಿಕ ಆಟಗಳನ್ನು ಇತರ ರಾಜ್ಯಗಳ ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು. ಸಿಬ್ಬ0ದಿ ವರ್ಗದವರು ಮತ್ತು ಕನ್ನಡೇತರ ರಾಜ್ಯಗಳ ವಿದ್ಯಾರ್ಥಿಗಳು ಕನ್ನಡ ಹಾಡುಗಳನ್ನು ಹಾಡಿದರು ಮಾತ್ರವಲ್ಲ ಹಾಡಿಗೆ ತಕ್ಕಂತೆ ನರ್ತಿಸಿದರು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ತಂಡಗಳ ನಡುವೆ ನಡೆದ ಕಬಡ್ಡಿ ಪಂದ್ಯ ಮತ್ತು 'ಜಾನಪದ ನೃತ್ಯ' ಪ್ರದರ್ಶನ – ರಾಜ್ಯೋತ್ಸವದ ಪ್ರಮುಖ ಆಕರ್ಷಣೆಗಳಾಗಿದ್ದವು.